

ಅದನ್ನು ಗಮನಿಸಿದ ಕುಪ್ಪಣ್ಣಯ್ಯ. 'ನೋಡಿ ಇವರೇ, ನನ್ನ ಹೋಟೆಲಿನಲ್ಲಿ ದಿನಕ್ಕೆ ನೂರೈವತ್ತು, ಇನ್ನೂರು ರೂಪಾಯಿಗಳ ವ್ಯಾಪಾರ ಇದೆ ನಿಜ. ಆದರೆ ಪ್ರತಿದಿನ ಬೆಳಗ್ಗಿನ ವ್ಯಾಪಾರದ ದುಡ್ಡನ್ನು ಮಧ್ಯಾಹ್ನ ಊಟಕ್ಕೆ ಹೋಗುವಾಗ ನಾನು ಮನೆಗೆ ಒಯ್ಯುತ್ತೇನೆ. ಈಗ ಎಷ್ಟಿದೆಯೋ ನೋಡುತ್ತೇನೆ' ಎಂದು ಗಲ್ಲಾ ಪೆಟ್ಟಿಗೆಯಲ್ಲಿದ್ದ ನೋಟು ಮತ್ತು ಚಿಲ್ಲರೆಗಳನ್ನೆಲ್ಲ ಮೇಜಿನ ಮೇಲೆ ಸುರಿದು, ಲೆಕ್ಕ ಮಾಡಿ 'ಎಪ್ಪತ್ತಾರು ರೂಪಾಯಿ ಐವತ್ತು ಪೈಸೆ ಇದೆ. ಇಷ್ಟನ್ನೂ ನಾನು ಈಗ ಕೊಡಬಲ್ಲೆ. ಹೆಚ್ಚಿಗೆ ಕೊಡಬೇಕಾದರೆ ನಾನು ಮನೆಗೇ ಹೋಗಿ ಬರಬೇಕು' ಎಂದರು.

ಹುಸೇನಿಯ ಮುಖ ಅರಳಿತು! ಆತ 'ನನ್ನಲ್ಲಿ ಬಾಡಿಗೆಯ ಹನ್ನೆರಡು ರೂಪಾಯಿಗಳಿವೆ. ಅದನ್ನು ನಾನು ಇವನಿಗೆ ಕೊಡುತ್ತೇನೆ. ನಿಮ್ಮದು ನನ್ನದೂ ಸೇರಿ ಎಂಬತ್ತೆಂಟು ರೂಪಾಯಿ ಆಯ್ತಲ್ಲ?' ಎಂದು ಇನಾಸನ ಮುಖ ನೋಡಿದ. ಇನಾಸ ಗರಬಡಿದವರ ಹಾಗೆ ನಿಂತಿದ್ದ. ಹುಸೇನಿ ಆ ದುಡ್ಡನ್ನು ಇನಾಸನ ಕೈಯಲ್ಲಿಟ್ಟ ತಕ್ಷಣ 'ಇದು ಅಗ್ನಿದಿವ್ಯ' ಎಂಬಂತೆ ಕಣ್ಣು ತುಂಬಿಕೊಂಡು ಇಬ್ಬರಿಗೂ ನಮಸ್ಕರಿಸಿ ಹೊರಟು ಹೋದ.

ಇಷ್ಟು ಹೇಳಿದ ಕುಪ್ಪಣ್ಣಯ್ಯ 'ಆ ಹುಸೇನಿಯಷ್ಟು ದೊಡ್ಡ ವ್ಯಕ್ತಿ ನಾನಲ್ಲ. ಅವನಿಗೆ ನೆರವಾಗುವುದು ನನ್ನ ಕರ್ತವ್ಯ' ಎಂದು ಹೇಳಿದವರೇ 'ಈಗ ಇನಾಸ ಸತ್ತಿದ್ದಾನೆ. ಆದರೆ ಬಚ್ಚಿರೆ ಬಾಯಿ ಇನ್ನೂ ಬದುಕಿದ್ದಾಳೆ. ಅವಳು ದಿನಾ ರಾಂಭಟ್ಟರ ಅಂಗಡಿಗೆ ಬಚ್ಚಿರೆ (ವೀಳ್ಯದೆಲೆ) ತಂದುಕೊಡುತ್ತಾಳೆ. ಅವನ ಮಗ ಸಿರಿಲ್ ದುಬಾಯಿಯಲ್ಲಿ ಈಗ ಇಲೆಕ್ಟ್ರಿಷಿಯನ್ ಆಗಿದ್ದಾನಂತೆ, ಕೈ ತುಂಬಾ ಸಂಪಾದನೆ ಇದೆಯಂತೆ. ಅವನು ಅಮ್ಮನಿಗೆ 'ನೀನು ಬಚ್ಚಿರೆ ಮಾರುವುದು ಬೇಡ' ಅನ್ನುತ್ತಾನಂತೆ. ಇವಳು ಕೇಳಬೇಕಲ್ಲ?' ಎಂದವರೇ 'ನಾಳೆ ನಾನು ಅವಳಿಂದ ಸಿರಿಲನ ಫೋನು ನಂಬ್ರ ತೆಗೆದುಕೊಂಡು ಅವನಿಗೆ ಫೋನು ಮಾಡಿ ಹುಸೇನಿಯ ಅವಸ್ಥೆ ಹೇಳುತ್ತೇನೆ. ಅವನಿಗೆ ಈ ಘಟನೆ ನೆನಪಿದ್ದರೆ ಖಂಡಿತ ಅವನು ಹುಸೇನಿಗೆ ನೆರವಾಗುತ್ತಾನೆ' ಎಂದರು.

ಪ್ರೇಮಕ್ಕ, 'ಇದೆಲ್ಲ ನನಗೆ ಹೇಗೆ ಗೊತ್ತಾಗಬೇಕು? ನಾವು ಮನೆಯೊಳಗೆ ಬಂದಿಗಳು' ಎಂದರು. ಆಮೇಲೆ 'ಹಾಗೇ ಮಾಡಿ ಒಳ್ಳೇದಾಗಲಿ' ಎಂದರು.

ಎರಡು ದಿನದ ಮೇಲೆ ಕುಪ್ಪಣ್ಣಯ್ಯ ಬಚ್ಚಿರೆ ಬಾಯಿಯಿಂದ ಸಿರಿಲ್‌ನ ಫೋನು ನಂಬ್ರ ತೆಗೆದುಕೊಂಡು ಸಿರಿಲ್‌ಗೆ ಫೋನು ಹಚ್ಚಿದರು. 'ಹುಸೇನಿ ಹೇಗೆ ನಿನಗೆ ಸಹಕರಿಸಿದ್ದಾರೆ' ಎಂದು ಒತ್ತಿ ಒತ್ತಿ ಹೇಳಿ 'ಆತನ ಆಧಾರ ಕಾರ್ಡನ್ನು ವಾಟ್ಸಾಪ್‌ನಲ್ಲಿ ನಿನಗೆ ಕಳುಹಿಸುತ್ತಿದ್ದೇನೆ' ಎಂದು ಹೇಳಿದವರೇ ಅದರ ಫೋಟೊ ತೆಗೆದು ವಾಟ್ಸಾಪ್ ಮಾಡಿದರು.

ಸಿರಿಲ್ ಮಾತೇ ಆಡಲಿಲ್ಲ. ಎಲ್ಲವನ್ನೂ ಸುಮ್ಮನೇ ಎಂಬಂತೆ ಕೇಳಿಸಿಕೊಂಡ. ಕುಪ್ಪಣ್ಣಯ್ಯನಿಗೆ ನಿರಾಶೆಯಾಯಿತು.

ಹದಿನೈದು ದಿನಗಳ ಮೇಲೆ ಸಿರಿಲ್‌ನಿಂದ ಕುಪ್ಪಣ್ಣಯ್ಯನಿಗೆ ಒಂದು ರಿಜಿಸ್ಟರ್ಡ್ ಕವರ್ ಬಂತು. ಅದರಲ್ಲಿ ಹುಸೇನಿಯ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಯ ಚೆಕ್ ಮತ್ತು ಒಂದು ಸಣ್ಣ ಪತ್ರ ಇತ್ತು. ಆ ಪತ್ರದಲ್ಲಿ 'ನನಗೆ ಒಂದು ಅಪರೂಪದ ಅವಕಾಶ ಕಲ್ಪಿಸಿಕೊಟ್ಟ ನಿಮಗೆ ದೇವರು ಒಳ್ಳೇದು ಮಾಡಲಿ' ಎಂಬ ಒಕ್ಕಣೆಯ ಜೊತೆ 'ಈ ಚೆಕ್ಕನ್ನು ಹುಸೇನಿಗೆ ನೀವೇ ತಲುಪಿಸಿ' ಎಂದು ಬರೆದಿತ್ತು. ●